ರಾಗವಾಗಿ ಹೊಗಳುತ್ತಾ ಅಳುವ ಕಾರ್ಯಕ್ರಮವನ್ನು ಸಾಂಗವಾಗಿ ನೆರವೇರಿಸಿದ ನಂತರ, ಷಡಕ್ಷರಿ ಐನೋರು 'ಹೊತ್ತಾಯಿತು' ಎಂದು ಮತ್ತೊಮ್ಮೆ ಗದರಿದ ನಂತರ, ಪಾರ್ವತಜ್ಜಿಯ ಶರೀರವನ್ನು ಹೊತ್ತುಕೊಂಡು ಬೇಗ ಬೇಗ ಎಲ್ಲರೂ ಊರಿನ ಸಮೀಪದಲ್ಲೇ ಇದ್ದ ತೋಟದ ಕಡೆ ಹೆಜ್ಜೆ ಹಾಕಿದರು. ಮೆರವಣಿಗೆ ದಾರಿಯುದ್ದಕ್ಕೂ ಸಾಗುವಾಗ ಆ ಊರಿನ ಹಲವಾರು ಹಿರಿಯ ತಲೆಗಳು ಪಾರ್ವತಜ್ಜಿಗೆ ಕಣ್ಣೀರಿನ ವಿದಾಯ ಹೇಳಿದವು. ಅಂತೂ ಅಜ್ಜಿಗೆ ಪ್ರಿಯವಾದ ದೊಡ್ಡ ಮಾವಿನ ಮರದ ಕೆಳಗೆ ತೆಗೆದಿದ್ದ ಗುಂಡಿಗೆ ಅಜ್ಜಿಯ ದೇಹವನ್ನು ಇಳಿಸಿದರು. ಅಲ್ಲಿಂದ ಶವಸಂಸ್ಕಾರದ ಅಂತಿಮ ವಿಧಿ-ವಿಧಾನಗಳು ಶುರುವಾದವು.

ಅಜ್ಜಿಯನ್ನು ಗುಂಡಿಯೊಳಗೆ ಮಲಗಿಸಿದ ನಂತರ, ಮತ್ತೊಮ್ಮೆ ಪೂಜೆ ನೆರವೇರಿಸಿ, ಗುಂಡಿಯೊಳಗೆ ನಾಲ್ಕು ದಿಕ್ಕಿಗೂ ದೀಪಗಳನ್ನು ಹಚ್ಚಿದ ನಂತರ ಮಣ್ಣು ಎಳೆಯುವ ಮುನ್ನ 'ಕೊನೆಯ ಬಾರಿ ಮುಖ ನೋಡುವವರಿದ್ದರೆ ಬೇಗ ಬನ್ನಿ' ಎಂದು ಐನೋರು ಕೂಗಿದಾಗ, ಅದುವರೆಗೂ ದೂರದಲ್ಲಿ ಮೌನವಾಗಿ ನಿಂತು ಎಲ್ಲವನ್ನೂ ನೋಡುತ್ತಿದ್ದ ಶಂಕರನು, ಗುಂಡಿಯ ಹತ್ತಿರಕ್ಕೆ ಬಂದು ಪಾರ್ವತಜ್ಜಿಯ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದ. ಅಜ್ಜಿಯು ಈಗ ಎಲ್ಲಾ ನೋವುಗಳಿಂದ ಮುಕ್ತಳಾಗಿದ್ದಾಳೆ ಎನಿಸಿತು. ಆದ್ದರಿಂದಲೇ ಏನೋ ಅಜ್ಜಿಯು ಹೇಳುತ್ತಿದ್ದ ಹಾಗೆಯೇ ಮುಖದ ಮೇಲಿನ ಸುಕ್ಕುಗಳು ಮೊದಲಿಗಿಂತ ಈಗ ಕಡಿಮೆಯಾಗಿವೆ ಎನಿಸಿತು. ಅಜ್ಜಿಯ ಮುಖದಲ್ಲಿ ಬದುಕಿದ್ದಾಗ ಇದ್ದಷ್ಟೇ ಮಂದಹಾಸ ಈಗಲೂ ಇತ್ತು. 'ಅದೇ ನಗುಮುಖವಲ್ಲವೇ ನನಗೆ ಚಿಕ್ಕಂದಿನಿಂದಲೂ ಬದುಕಿನ ಭರವಸೆ, ಪ್ರೀತಿ ಕೊಟ್ಟದ್ದು? ಕಂಗೆಟ್ಟಾಗಲೆಲ್ಲಾ ಇದೇ ಮುಖವಲ್ಲವೇ ನನಗೆ ಸಾಂತ್ವನ ಹೇಳಿದ್ದು? ಇದೇ ಪಾರ್ವತಜ್ಜಿಯಲ್ಲವೇ ಜನಿಸಿದಾಗ, ಸಾವಿನ ಅಂಚಿನಲ್ಲಿದ್ದ ನನ್ನನ್ನು ಹಗಲು ರಾತ್ರಿ ಆರೈಕೆ ಮಾಡಿ, ಉಪವಾಸ ವ್ರತಗಳನ್ನು ಮಾಡಿ ದೇವರನ್ನೇ ಗೆದ್ದು ನನ್ನ ಉಳಿಸಿದವಳು? ಇಂತಹ ಅಜ್ಜಿಗೆ ನಾನು ಏನು ಕೊಟ್ಟೆ?' ಎಂದು ಯೋಚಿಸುತ್ತಾ ಗುಂಡಿಯೊಳಗೆ ಇಳಿದ ಶಂಕರನು ಅಜ್ಜಿಯ ಪಾದಗಳ ಮೇಲೆ ಮುಖವನ್ನಿಟ್ಟು 'ಅಜ್ಜೀ, ಸಾಧ್ಯವಾದರೆ ನನ್ನನ್ನು ಕ್ಷಮಿಸಿಬಿಡು' ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅಳತೊಡಗಿದ. ಅದುವರೆಗೂ ಗರಬಡಿದವನಂತೆ ಒಂದು ತೊಟ್ಟು ಕಣ್ಣೀರೂ ಹಾಕದೆ ನಿಂತಿದ್ದ ಶಂಕರನಿಗೆ ಇನ್ನು ತನ್ನ ಪ್ರೀತಿಯ ಅಜ್ಜಿ ಮತ್ತೆಂದೂ ಸಿಗುವುದಿಲ್ಲ ಎಂಬ ಸತ್ಯ ಅರಿವಾಗಿತ್ತು. ಶಂಕರನು ತನ್ನ ಕಣ್ಣೀರಿನಿಂದ ಅಜ್ಜಿಯ ಪಾದಗಳಿಗೆ ಅಭಿಷೇಕ ಮಾಡತೊಡಗಿದ. ಗುಂಡಿಯಲ್ಲಿಯೇ ಅಜ್ಜಿಯ ಪಾದದ ಬಳಿ ಕುಳಿತು ಗದ್ಗದಿಸಿ ಅಳುತ್ತಿದ್ದ ಶಂಕರನನ್ನು ಗುಂಡಿಯ ಮೇಲಿದ್ದ ಎಲ್ಲರೂ ಗದರಿಕೊಂಡು ಮೇಲೆಳೆದುಕೊಂಡರು.

ಗುಂಡಿಯೊಳಗೆ ಅಜ್ಜಿಯನ್ನಿಟ್ಟು ಮಣ್ಣು ಮಾಡಿದ ಕ್ಷಣಕ್ಕಾಗಿಯೇ ಕಾಯುತ್ತಿತ್ತೇನೋ ಎಂಬಂತೆ 'ಧೋ' ಎಂದು ಮಳೆ ಸುರಿಯಲಾರಂಭಿಸಿತು. ಅದು ಅಂತಿಂಥ ಮಳೆಯಲ್ಲ. ಪ್ರಕೃತಿಯು ಯಾರ ಮೇಲೋ



ಮುನಿಸಿಕೊಂಡಂತೆ, ಯಾರಿಗೋ ಬುದ್ಧಿ ಕಲಿಸುವಂತೆ, ಆಲಿಕಲ್ಲುಗಳೊಂದಿಗೆ ಮಳೆಯು ಬಿರುಸಾಗಿ ರಪರಪನೆ ರಾಚತೊಡಗಿತು. ಮಳೆ ಬಾರಿಸತೊಡಗುತ್ತಿದ್ದಂತೆ, ಬಂದಿದ್ದ ಸಂಬಂಧಿಕರೆಲ್ಲಾ ತಲೆಯ ಮೇಲೆ ಟವೆಲ್ ಹಾಕಿಕೊಂಡು ಮನೆಗಳ ಕಡೆಗೆ ಓಟಕಿತ್ತರು. ಮಾವಿನ ಮರದ ಕೆಳಗೆ ಅಜ್ಜಿಯನ್ನು ಮಣ್ಣು ಮಾಡಿದ್ದ ಗುಡ್ಡೆಯ ಪಕ್ಕ ಕುಳಿತ ಶಂಕರನ ಕಣ್ಣೀರು ನಿಲ್ಲುವಂತಿರಲಿಲ್ಲ. ಮುಗಿಲಿನಿಂದ ಒಂದೇ ಸಮನೆ ಸುರಿಯುತ್ತಿದ್ದ ಮಳೆಯ ಆರ್ಭಟವಾಗಲೀ ಶಂಕರನ ಅಳುವನ್ನಾಗಲೀ ಒಂದೂ ಕೇಳಿಸಿಕೊಳ್ಳದ ಪಾರ್ವತಜ್ಜಿ ಗುಂಡಿಯಲ್ಲಿ ತಣ್ಣಗೆ ಮಲಗಿದ್ದಳು.

●